ಸಿಸಿ ನಂಬರ. 637/2022

ಪಿ ಡಬ್ಲ್ಯೂ- 2

ದಿಃ 02-08-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತರ ಪರ ವಕೀಲರಾದ ಶ್ರೀ ಜಿ.ವಿ.ಎನ್ ರವರಿಂದಃ

ಚಾಸಾ-1,2 ಮತ್ತು 4 ಇವರೆಲ್ಲರೂ ನಮ್ಮ ಇಲಾಖೆಗೆ ಸಂಬಂಧಪಟ್ಟವರು ಎಂದರೆ ಸರಿ. ಚಾಸಾ-1 ರವರು ನನಗಿಂತ ಮೇಲಿನ ದರ್ಜೆಯವರು ಎಂದರೆ ಸರಿ. ನೀವು ಹೇಳಿದ ಹಾಗೆ ದಿಃ29-05-2021 ರಂದು ಪಂಚನಾಮೆ ಮಾಡಲು ಯಾರಾದರೂ ನಿಮಗೆ ನೋಟೀಸನ್ನು ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಪಂಚನಾಮೆಗೆ ಬರಲು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಪಿ ಎಸ್ ಐ ಸಂಪತ್ತ ಇವರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಫೋನ್ ಮುಖಾಂತರ ಅಥವಾ ವೈಯಕ್ತಿಕವಾಗಿ ಕರೆದಿರುತ್ತಾರಾ ಎಂದರೆ ಸಾಕ್ಷಿಯು ಫೋನ್ ಮುಖಾಂತರವಾಗಲಿ ಅಥವಾ ವೈಯಕ್ತಿಕವಾಗಲಿ ಕರೆದಿರುವುದಿಲ್ಲ, ತಹಶೀಲ್ದಾರ ಇವರಿಗೆ ಹೇಳಿದ್ದು, ತಹಶೀಲ್ದಾರ ಇವರು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ತಹಶೀಲ್ದಾರ ನಿಮ್ಮನ್ನು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಉದಯ ಕುಂಬಾರ ಇವರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಉದಯ ಕುಂಬಾರ ಇವರು ನಿಮ್ಮನ್ನು ಕರೆದ ಸಂದರ್ಭದಲ್ಲಿ

ತಹಶೀಲ್ದಾರ ಆಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರಾ ಎಂದರೆ ಸಾಕ್ಷಿಯು ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಎಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ಅಂಕೋಲಾದಲ್ಲಿ ಎಂದು ನುಡಿಯುತ್ತಾರೆ. ಅಂಕೋಲಾ ತಹಶೀಲ್ದಾರ ಇವರು ನಿಮ್ಮನ್ನು ಎಷ್ಟು ಗಂಟೆಗೆ ಕರೆದಿರುತ್ತಾರೆ ಎಂದರೆ ಸಾಕ್ಷಿಯು ಬೆಳಿಗ್ಗೆ 11 ಗಂಟೆಗೆ ಹೇಳಿದ್ದು, ನಾವು 11.20 ಗಂಟೆಯ ಸುಮಾರಿಗೆ ಠಾಣೆಯ ಹತ್ತಿರ ಇದ್ದೇವು ಎಂದು ನುಡಿಯುತ್ತಾರೆ.

2. ಆ ದಿನ ನೀವು ಎಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿಯು ತಹಶೀಲ್ದಾರ ಕಚೇರಿಯಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸರಕಾರಿ ಕರ್ತವ್ಯದಲ್ಲಿ ಇದ್ದಾಗ ಬೇರ ಕಡೆ ಎಲ್ಲಿಯಾದರೂ ಹೋಗಬೇಕಾದರೆ ಪರವಾಣಿಗೆಯನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿಯು ನಮ್ಮದು ಪೀಲ್ಡ ವರ್ಕ ಆಗಿದ್ದರಿಂದ ತಹಶೀಲ್ದಾರ ಹೇಳಿದ್ದರ ಮೇರೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ನೀವು ಪಿಲ್ಡ ವರ್ಕ ಇತ್ತು ಹಾಗೂ ಯಾವ ಕರ್ತವ್ಯವನ್ನು ಮಾಡುತ್ತಿದ್ದೀರಿ ಎನ್ನುವುದರ ಬಗ್ಗೆ ದೃಢೀಕರಣ ಪತ್ರವನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ರೀತಿಯ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕಾಗಲಿ ಅಥವಾ ತನಿಖಾಧಿಕಾರಿಗಳಿಗಾಗಲಿ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

3. ತಹಶೀಲ್ದಾರ ರವರು ಪಂಚನಾಮೆಗೆ ಕರೆದಿದ್ದರ ಬಗ್ಗೆ ಪಂಚನಾಮೆಯಲ್ಲಾಗಲಿ ಅಥವಾ ನಿಮ್ಮ ಹೇಳಿಕೆಯಲ್ಲಾಗಲಿ ಎಲ್ಲಿಯೂ ಸಹ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ನೀವು 11.20 ರಿಂದ ಎಷ್ಟು ಗಂಟೆಯವರೆಗೆ ಇದ್ದೀರಿ ಎಂದರೆ ಸಾಕ್ಷಿಯು ಮಧ್ಯಾಹ್ನ 1.30 ಗಂಟೆಯವರೆಗೆ ಇದ್ದೇನು ಎಂದು ನುಡಿಯುತ್ತಾರೆ. ನಿಮ್ಮ ಜೊತೆಗೆ ಒಟ್ಟು ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ನಮ್ಮ ಇಲಾಖೆಗೆ ಸಂಬಂಧಪಟ್ಟ 3 ಸಿಬ್ಬಂದಿಯವರು ಮತ್ತು ಪೊಲೀಸ್ ಸಿಬ್ಬಂದಿ ಇದ್ದು, ಅವರು ಎಷ್ಟು ಜನ ಎಂದು ನಿಖರವಾಗಿ ಹೇಳಲು ಬರುವುದಿಲ್ಲ.

4. ತಾವು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಸ್ಥಿತಿ ಗತಿ ಯಾವ ರೀತಿ ಇತ್ತು ಎಂದರೆ ಸಾಕ್ಷಿಯು ಅಲ್ಲಿ ಒಂದು ರಿಕ್ಷಾ ಇದ್ದು, ರೀಕ್ಷಾದಲ್ಲಿ 29 ಅಕ್ಕಿ ಚೀಲಗಳು ಇದ್ದವು ಎಂದು ನುಡಿಯುತ್ತಾರೆ. ಚೀಲಗಳನ್ನು ನೀವೆ ಲೆಕ್ಕ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿಯೊಂದು ಚೀಲದಲ್ಲಿ ಎಷ್ಟೇಷ್ಟು ಅಕ್ಕಿಗಳು ಇದ್ದವು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ನೀವೆ ಹೇಳಿ ಬರೆಸಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರಿಗೆ ನೀವು ಹೀಗಿಗೆ ಬರೆಯಿರಿ ಎಂದು ನೀವೇನು ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಬರೆದ ನಂತರ ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳಿದ

ಪಂಚನಾಮೆಯಲ್ಲಿ ಯಾವ ಯಾವ ಪ್ಯಾರಾದಲ್ಲಿ ಏನೇನು ಬರೆದಿದೆ ಹಾಗೂ ಎಷ್ಟು ಪ್ಯಾರಾಗಳು ಇರುತ್ತವೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

5. ಪೊಟೋಗಳನ್ನು ಯಾರು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಮೊಬೈಲ್ ನಿಂದ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪೊಟೋವನ್ನು ತೆಗೆಯುವ ಸಮಯದಲ್ಲಿ ಎಷ್ಟು ಜನ ಪೊಲೀಸರು ಇದ್ದರು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತೂಕದ ಯಂತ್ರವನ್ನು ಯಾರು ತೆಗೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರೇ ತೆಗೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ತೂಕದ ಯಂತ್ರದ ಗರಿಷ್ಟ ತೂಕ ಎಷ್ಟು ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ತೂಕದ ಯಂತ್ರ ಯಾವ ಕಂಪನಿಗೆ ಸೇರಿದ್ದು, ಹಾಗೂ ಅದು ಎಷ್ಟು ಕೆ.ಜಿ ಇರುತ್ತದೆ ಎಂದು ನೀವು ಕೇಳಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ದಿಃ29-05-2021 ರಂದು ಅಂಕೋಲಾ ಪೊಲೀಸ್ ಠಾಣೆಗೆ ಯಾವುದೇ ಪಂಚನಾಮೆಗೆ ಹೋಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿದ್ದರಿಂದ ಹಾಗೂ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ದಿಃ29-05-2021 ರಂದು ಅಂಕೋಲಾ ಪೊಲೀಸ್ ಠಾಣೆಗೆ ಪಂಚನಾಮೆಗೆಂದು ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿಮ್ಮ ಪ್ರಕಾರ ದಿಃ29-05-2021 ರಂದು ಮಂಜಗುಣಿ ಖಾರ್ವಿವಾಡಾಕ್ಕೆ ಎಷ್ಟು ಗಂಟೆಗೆ ಪಂಚನಾಮೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಮಧ್ಯಾಹ್ನ 2 ಗಂಟೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆ ಪಂಚನಾಮೆಗೆ ನಿಮ್ಮನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸ್ ಠಣೆಗೆ ಪಂಚನಾಮೆಗೆಂದು ಹೋದಾಗ ಪೊಲೀಸರಾದ ಸಂಪತ್ತ ಇವರೇ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಖಾರ್ವಿವಾಡಾಕ್ಕೆ ಪಂಚನಾಮೆಗೆ ವೈಯಕ್ತಿಕವಾಗಿ ಕರೆದಿರುತ್ತಾರಾ ಅಥವಾ ನೋಟೀಸನ್ನು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ವೈಯಕ್ತಿಕವಾಗಿ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅಲ್ಲಿಗೆ ಹೋಗಬೇಕಾದರೆ ನೀವು ಅನುಮತಿಯನ್ನು ಪಡೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿಯು ಹೌದು ತಹಶೀಲ್ದಾರ ಇವರಿಂದ ಪಡೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಮೌಖಿಕವಾಗಿ ಕೊಟ್ಟಿರುತ್ತಾರಾ ಅಥವಾ ಲಿಖಿತವಾಗಿ ಕೊಟ್ಟಿರುತ್ತಾರಾ ಎಂದರೆ ಮೌಖಿಕವಾಗಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಕರ್ತವ್ಯದಲ್ಲಿದ್ದಾಗ ಎಲ್ಲಿಯಾದರೂ ಹೋಗಬೇಕಾದರೆ ಲಿಖಿತವಾಗಿ ಅನುಮತಿಯನ್ನು ಪಡೆದುಕೊಂಡು ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ನಿಮ್ಮ ಕಚೇರಿಯಲ್ಲಿ ಮುಮೆಂಟ್ ರಜಿಷ್ಟರ ಇರುತ್ತದೆ ಎಂದರೆ ಸರಿ. ರಜಿಷ್ಟರನಲ್ಲಿ ನೀವು ಕಚೇರಿಯಲ್ಲಿ ಎಷ್ಟರಿಂದ ಎಷ್ಟು ಗಂಟೆಯವರೆಗೆ ಕರ್ತವ್ಯ ಮಾಡಿರುತ್ತೀರಿ ಎಂದು ಪಿಲ್ಡ ವರ್ಕಗೆಹೋಗುವಾಗ ಅದರಲ್ಲಿ ನಮೂದು ಮಾಡಿ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ಪಿಲ್ಡ ವರ್ಕನಲ್ಲಿ

ಇರುವ ಕಾರಣ  ಅದು ನಮಗೆ  ಅನ್ವಯಿಸುವುದಿಲ್ಲ ಎಂದು ನುಡಿಯುತ್ತಾರೆ.  ನೀವು ಕರ್ತವ್ಯಕ್ಕೆ ಹಾಜರಾದಾಗ ರಜಿಷ್ಟರ್ ನಲ್ಲಿ ನಮೂದು ಮಾಡುತ್ತೀರೋ ಅಥವಾ ಇಲ್ಲವೊ ಎಂದರೆ ಸಾಕ್ಷಿಯು ಅದು ನಮಗೆ ಅನ್ವಯಿಸುವುದಿಲ್ಲ ಎಂದು ನುಡಿಯುತ್ತಾರೆ.  ನೀವು ಪಿಲ್ಡ ವರ್ಕಗೆ ಹೋಗಬೇಕಾದರೆ ಕಚೇರಿಗೆ ಹೋಗಿ ಹೋಗುತ್ತೀರೋ ಅಥವಾ ಹಾಗೆ ಮನಸ್ಸಿಗೆ ಬಂದ ಹಾಗೆ ಹೋಗುತ್ತೀರೋ ಎಂದರೆ ಸಾಕ್ಷಿಯು ನಮ್ಮ ಕಚೇರಿಗೆ ಹೋಗಿ ಪಿಲ್ಡ ವರ್ಕಗೆ ಹೋಗುತ್ತೇವೆ ಎಂದು ನುಡಿಯುತ್ತಾರೆ.  ನೀವು ದಿಃ29-05-2021 ರಂದು ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ಎಲ್ಲಿ ಕರ್ತವ್ಯ ಮಾಡುತ್ತಿದ್ದೀರಿ ಎಂದು  ತೋರಿಸಲು ದೃಢೀಕರಣ ಪತ್ರವನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.   ಕಂದಾಯ ನಿರೀಕ್ಷಕರಿಗೆ ಸರಕಾರಿದ ನಿಯಮಗಳು ಇರುತ್ತವೆಯೋ ಅಥವಾ ಬೇರೆ ನಿಯಮಗಳು ಇರುತ್ತವೆಯೋ ಎಂದರೆ ಸಾಕ್ಷಿಯು ಸರಕಾರದ ನಿಯಮಗಳು ಇದ್ದು, ಅದು ಪಿಲ್ಡ ವರ್ಕಗೆ ಅನ್ವಯಿಸುದಿಲ್ಲ ಎಂದು ನುಡಿಯುತ್ತಾರೆ.  ದಿಃ29-05-2021 ರಂದು ನೀವು ಎಲ್ಲಿ ಕಂದಾಯ ನಿರೀಕ್ಷಕಗಿರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಅಂಕೋಲಾದಲ್ಲಿ ಎಂದು ನುಡಿಯುತ್ತಾರೆ.  ನಿಮ್ಮನ್ನು ಬಿಟ್ಟು ಎಷ್ಟು ಜನ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸಾಕ್ಷಿಯು ಸರಕಾರಿ ಸಿಬ್ಬಂದಿಗಳು ಇದ್ದು, ಆದರೆ ಎಷ್ಟು ಜನ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.  ನಿಮ್ಮ ಕಚೇರಿಯಲ್ಲಿ ನೀವೆ ಮೇಲಾಧಿಕಾರಿಯಾಗಿರುತ್ತೀರೋ ಅಥವಾ

ಬೇರೆ ಯಾರಾದರೂ ಇರುತ್ತಾರೆಯೋ ಎಂದರೆ ಸಾಕ್ಷಿಯು ನನಗಿಂತ ಮೇಲಾಧಿಕಾರಿ ಬೇರೆಯವರು ಇರುತ್ತಾರೆ ಎಂದು ನುಡಿಯುತ್ತಾರೆ.

7. ಮಂಜಗುಣಿ ಖಾರ್ವಿವಾಡಾ ಜನವಸತಿ ಪ್ರದೇಶ ಎಂದರೆ ಸರಿ. ನೀವು ಪಂಚನಾಮೆಗೆ ಹೋದಾಗ ಬಹಳಷ್ಟು ಜನ ಸೇರಿದ್ದು, ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ಆ ಸಂದರ್ಭದಲ್ಲಿ ನೀವೇನಾದರೂ ಅಥ,ವಾ ಚಾಸಾ–1 ರವರು ಸ್ಥಳೀಯರು ಪ್ರತ್ಯಕ್ಷ ದರ್ಶಿಗಳನ್ನಾಗಿ ಕರೆದಿರುತ್ತೀರಾ ಎಂದರೆ ಸಾಕ್ಷಿಯು ಸರಕಾರಿ ಪಂಚನಾಮೆಗೆಂದು ಹೋಗಿದ್ದ ಕಾರಣ ಸ್ಥಳೀಯರನ್ನು ಕರೆಸುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಮಂಜಗುಣಿ ಖಾರ್ವಿವಾಡಾದಲ್ಲಿ ಮಾಡಲಾದ ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಬರೆದ ನಂತರ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಅದನ್ನು ಓದಿಕೊಂಡು ಸಹಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಓದಲು ಹಾಗೂ ಬರೆಯಲು ಸ್ಪಷ್ಟವಾಗಿ ಬರುತ್ತದೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಯಾರು, ಎಷ್ಟು ಗಂಟೆಗೆ ಹಾಗೂ ಎಲ್ಲಿ ಓದಿ ಹೇಳಿದರು ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಪೊಲೀಸ್ ಸಿಬ್ಬಂದಿ ಓದಿ ಹೇಳಿದ್ದು, ಅವರ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಓದಿ ಹೇಳಿದ ಪಂಚನಾಮೆಯಲ್ಲಿ ಒಟ್ಟು ಎಷ್ಟು ಪ್ಯಾರಾಗಳು ಇರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಹಾಗೂ ಯಾವ ಯಾವ ಪ್ಯಾರಾಗಳಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು

ಪೂರ್ತಿಯಾಗಿ ಗೊತ್ತಿರುವುದಿಲ್ಲ, ಸಂಕ್ಷಿಪ್ತವಾಗಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ದಿಃ29-05-2021 ರಂದು ಮಧ್ಯಾಹ್ನ 2 ರಿಂದ 2.45 ಗಂಟೆಯವರೆಗೆ ಯಾವುದೇ ಪಂಚನಾಮೆ ಹೋಗಿದ್ದಾಗಲಿ ಅಥವಾ ಅಲ್ಲಿ ಸಹಿ ಹಾಕಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಬೇಕಾಗಿದ್ದರಿಂದ ಅವರು ತಮ್ಮ ಸರಕಾರಿ ಕರ್ತವ್ಯವನ್ನು ತೋರಿಸುವ ಸಲುವಾಗಿ ದಾಖಲಿಸಿದ ಸುಳ್ಳು ದೂರಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲಿಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನೂ ಸಹ ಚಾಸಾ-1 ರವರೇ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(ಪಾಟೀ ಸವಾಲು 2 ನೇ ಆರೋಪಿ ಪರ ವಕೀಲರು 1 ಮತ್ತು 3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.